# ಕನಸು ಕಂಗಳಿಗೆ ದನಿಯಾದ ವಚನ ಸಾಹಿತ್ಯ

—ಮಂಜುಶ್ರೀ ಎಂ. ಕಡಕೋಳ

**ಇಬ್ಬರು ಶರಣರ ಕಥೆಯೊಂದಿಗೆ ಪ್ರಾರಂಭಿಸಿ ವಚನ ಸಾಹಿತ್ಯವು ಜನ ಸಾಮಾನ್ಯರ ಆಶೋತ್ತರಗಳನ್ನು ಪ್ರತಿಧ್ವನಿಸುತ್ತವೆಂಬುದನ್ನು ಚಿತ್ರಿಸಿರುವ ಮಂಜುಶ್ರೀ ಎಂ.ಕಡಕೋಳ ದಾವಣಗೆರೆಯಲ್ಲಿ ಬಿ.ಎ. ವಿದ್ಯಾರ್ಥಿನಿಯಾಗಿರುವರು.**

ಅಂದು ಆಕೆಗೆ ಎಲ್ಲಿಲ್ಲದ ಸಂತಸ, ಸಂಭ್ರಮ. ಜೊತೆಗೆ ಅಷ್ಟೇ ಪ್ರಮಾಣದ ದುಃಖ, ಹೊಟ್ಟೆಯಲ್ಲಿ ಏನೋ ಒಂದು ರೀತಿ ಹೇಳಲಾರದ ಸಂಕಟ, ತಳಮಳ. ಹೌದು ತಾನಿನ್ನು ಮದುವೆಯಾಗಿ ಗಂಡನ ಮನೆಗೆ ಹೋದಮೇಲೆ ತನ್ನಣ್ಣನ್ನನ್ನು ಯಾರು ನೋಡಿಕೊಳ್ಳುತ್ತಾರೆ? ವಿಚಾರಿಸುತ್ತಾರೆ? ಹೀಗೆ ಹತ್ತಾರು ಪ್ರಶ್ನೆಗಳ ಚಕ್ರ ಸುಳಿಯಲ್ಲಿ ಆಕೆ ಸಿಲುಕಿಕೊಂಡಿದ್ದಳು. ಮುಖ್ಯವಾಗಿ ತನ್ನನ್ನು ತಂದೆಯಂತೆ ನಿಂತು ಬೆಳೆಸಿದ, ಜೀವನವೆಂದರೆ ಏನೆಂದು ತೋರಿಸಿಕೊಟ್ಟ 'ಅಧ್ಯಾತ್ಮ ಗುರು'ವಾಗಿದ್ದ ಅಜಗಣ್ಣನನ್ನು ಇನ್ನು ಮುಂದೆ 'ಲಕ್ಕುಂಡಿ' ಗ್ರಾಮದಲ್ಲಿ ಬಿಟ್ಟು ತಾನು 'ಮಸಳೀಕಲ್ಲಿ'ಗೆ ಹೋಗುವುದಾದರೂ ಹೇಗೆ? ನೂರಾರು ಭಾವನೆಗಳನ್ನು ಒಮ್ಮೆಲೆ ತನ್ನ ಹೃದಯದಲ್ಲಿ ತುಂಬಿಕೊಂಡು ಪರಿತಪಿಸುತ್ತಿದ್ದಳು. ಆಗ ಮುಕ್ತಾಯಕ್ಕನನ್ನು ಅಜಗಣ್ಣ ಸಂತೈಸಿ ನಿಜ ಶಿವಾನುಭವದ ಅರಿವನ್ನು ತಿಳಿಸುತ್ತಾನೆ. ಸರಳೆ ಮುಕ್ತಾಯಕ್ಕ ಚಿಕ್ಕವಳಿದ್ದಾಗ ತಾನು, ಅಜಗಣ್ಣ ಕೂಡಿ ಹಸಿರ ಬಯಲಿನಲ್ಲಿ ಆಡಿದ್ದು, ಭೂದೇವಿಯ ಮಡಿಲಲ್ಲಿ, ಊರ ಹೊರಗಿನ ಶಿವನ ಗುಡಿಯಲ್ಲಿ ಸಾಕಾಗುವತನಕ ಭಜನೆ ಮಾಡಿದ್ದು, ಬೆಳೆಯುತ್ತಾ ಬೆಳೆಯುತ್ತಾ ಅಜಗಣ್ಣನು ತಂಗಿ ಮುಕ್ತಾಯಕ್ಕನನ್ನೇ ಮರೆಯುವಷ್ಟು ಪಂಚಾಕ್ಷರೀ ಮಂತ್ರ ಜಪಿಸುತ್ತಾ ಧ್ಯಾನಾಸಕ್ತನಾಗಿದ್ದು—ಎಲ್ಲವನ್ನೂ ನೆನೆಸಿಕೊಂಡು ಕಂಗಳ ತುಂಬಾ ಪ್ರೀತಿ ತುಂಬಿಕೊಂಡು ಕೇಳುತ್ತಾಳೆ: 'ಅಣ್ಣಾ, ನೀನು ಅಧ್ಯಾತ್ಮದಾಗ ಮುಂದುವರೆದು ಶಿವನೊಡನೆ ಒಂದಾದರೆ ನಂಗೆ ಹ್ಯಾಂಗ ಗೊತ್ತಾಗತ್ತೈತಿ? ಹೇಳಣ್ಣಾ' ಅಂದಾಗ ಅಜಗಣ್ಣ ಹೀಗೆ ಹೇಳುತ್ತಾನೆ:



ಮುಕ್ತಾಯಕ್ಕ ಮತ್ತು ಅಜಗಣ್ಣ

ನಾರಿ ನೀನುಟ್ಟ ಸೀರೆಯ ನಿರಿಯು ಕಳೆದಪುದು
ತೋರ ಮುಡಿಗಟ್ಟು ಬಿಚ್ಚುವುದು ಕಡೆ ಮತ್ತಿರ್ಪ
ಮೊಸರು ತಾಂ ಕಲ್ಲುಪ್ಪುದು ||

ತಂಗೀ ಅಂತ ಹೇಳಿ ಮುಕ್ತಾಯಿಯನ್ನ ಗಂಡನ ಮನೆಗೆ ಕಳುಹಿಸುತ್ತಾನೆ. ವರುಷಗಳುರುಳಿದಂತೆ ಗೃಹಸ್ಥನಾದ ಅಜಗಣ್ಣ ತನ್ನ ಸಾಧನೆಯಲ್ಲಿ ಕಾಯಕ ಮಾಡುತ್ತಲೇ ಮುಂದುವರಿದು ಮೌನವಾಗಿ ಪಂಚಾಕ್ಷರೀ ಮಂತ್ರ ಜಪಿಸುತ್ತಿರುವಾಗ ಒಮ್ಮೆ ಆಕಸ್ಮಿಕವಾಗಿ ಜಗುಲಿಗೆ ತಲೆ ಬಡಿದು, ಅದರ ನೋವಿಗೆ 'ಶಿವಾ' ಅಂತ ಜೋರಾಗಿ ಬಾಯ್ಬಿಟ್ಟು ಹೇಳಿದಾಗ ತನ್ನ ಮೌನವ್ರತ ಮುರಿಯಿತಲ್ಲಾ ಎಂದು ಬಯಲೊಳಗೆ ಬಯಲಾಗುತ್ತಾನೆ. ಇತ್ತ ಗಂಡನ ಮನೆಯಲ್ಲಿದ್ದರೂ ಶಿವಾನುಭವ ಸಾಧನೆಯನ್ನು ಮಾಡುತ್ತಿದ್ದ ಮುಕ್ತಾಯಿಗೆ ತನ್ನಣ್ಣ ಹೇಳಿದ ಘಟನೆಗಳೆಲ್ಲಾ ಒಂದೊಂದಾಗಿ ಸಂಭವಿಸಿದಾಗ ದುಃಖ ತಡೆಯಲಾರದೆ 'ಲಕ್ಕುಂಡಿ'ಗೆ ಬಂದು ನೋಡುತ್ತಾಳೆ. ತನ್ನ ಅಧ್ಯಾತ್ಮ ಗುರು ಅಜಗಣ್ಣ ಲಿಂಗೈಕ್ಯನಾಗಿರುತ್ತಾನೆ. 'ನೀನಿಲ್ಲದೆ ನಾನೆಂತು ಬದುಕುವೆನಣ್ಣಾ? ತಂದೆಯನಗಲಿ ನಾನೆಂತು ಸೈರಿಸುವೆನೆಲೆ ...' ಎಂದು ತನ್ನ ಸಂಕಟವನ್ನು ತೋಡಿಕೊಳ್ಳುತ್ತಾಳೆ. ಒಡಹುಟ್ಟಿದ ಸೋದರನಾದರೂ, ಸಾಧನೆಯಲ್ಲಿ ತನಗೆ ಗುರುವಾಗಿದ್ದ ಅಜಗಣ್ಣನ ನೆನಪು ಬಹಳ ದಿನಗಳವರೆಗೆ ಕಾಡುತ್ತದೆ. ಅಲ್ಲಮಪ್ರಭುದೇವರು ಮುಕ್ತಾಯಕ್ಕನನ್ನು ಸಂತೈಸಲು ಬರುತ್ತಾರೆ. ಆಗ ಅಲ್ಲಮಪ್ರಭುದೇವರಿಗೂ, ಶರಣೆ ಮುಕ್ತಾಯಿಗೂ ವಚನರೂಪದಲ್ಲಿ ಸಂಭಾಷಣೆಯೇರ್ಪಡುತ್ತದೆ. ಮುಕ್ತಾಯಕ್ಕನಿಗೆ ತನ್ನ ಗುರು, ಸೋದರ ಅಜಗಣ್ಣನ ಮೇಲೆ ಎಲ್ಲಿಲ್ಲದ ಪ್ರೀತಿ, ಅಭಿಮಾನ. ಮುಕ್ತಾಯಕ್ಕ ಸುಜ್ಞಾನಿ, ಅನುಭಾವೀ ಸ್ತ್ರೀ, ವಿಚಾರವಂತೆ. ಆಕೆ ಅಂಥಾ ಜ್ಞಾನಿಯಾದ ಜಂಗಮಮೂರ್ತಿ ಅಲ್ಲಮಪ್ರಭುದೇವರನ್ನೇ ಸಂದೇಹಿಸಿ ಬಗೆಬಗೆಯಾಗಿ ಪ್ರಶ್ನಿಸಿ, ಮಾತಿನ ಮೋಡಿಯಲ್ಲಿ ಬಂಧಿಸುತ್ತಾಳೆ. ಅಲ್ಲಮರು ಒಂದಿನಿತೂ ಬೇಸರಿಸದೆ ಮುಕ್ತಾಯಿಯ ವಚನ ಸಾಮರ್ಥ್ಯಕ್ಕೆ, ಜ್ಞಾನಕ್ಕೆ ಬೆಲೆ ಕೊಟ್ಟು ಆಕೆಯನ್ನು ಸಂತೈಸುತ್ತಾರೆ. ಕೊನೆಗೆ ಮುಕ್ತಾಯಕ್ಕನಿಗೆ ನಿಜ ಶಿವದರಿವನ್ನು ಬೋಧಿಸಿ ಸಾಧನೆಯಲ್ಲಿ ಮುಂದುವರಿಯಲು ಸ್ಫೂರ್ತಿಯಾಗುತ್ತಾರೆ.

ಹೀಗೆ ಮುಕ್ತಾಯಕ್ಕ, ಅಕ್ಕಮಹಾದೇವಿ, ವೀರಮ್ಮರಂಥ ಸ್ತ್ರೀಯರಿಗೆ ಪತಿಪ್ರಧಾನವಾಗಿದ್ದ ಅಂದಿನ ಸಮಾಜದಲ್ಲಿ ಒಂದು ವೇದಿಕೆಯನ್ನೊದಗಿಸಿದ, ಕೆಳವರ್ಗದ ಜನರಿಗೆ ಸಮಾನ ಅವಕಾಶ ನೀಡಿದ, ಪುರೋಹಿತಷಾಹಿ ವರ್ಗದವರ ಕಾಲ್ತುಳಿತಕ್ಕೆ ಬಲಿಯಾಗಿ ಕನಸುಗಳನ್ನೆ ಮರೆತಿದ್ದ ಸಾಮಾನ್ಯ ಜನರ ಕನಸು ಕಂಗಳಿಗೆ ದನಿಯಾಗಿ ಬಂದು, ಸಖಿಯಂತೆ ಮುನ್ನಡೆಸಿದ ಕೀರ್ತಿ ವಚನಸಾಹಿತ್ಯ, ವಚನಕ್ರಾಂತಿ ಅಥವಾ ವಚನಚಳುವಳಿಗೆ ಸಲ್ಲುತ್ತದೆ. ದೇವರ ದಾಸಿಮಯ್ಯ, ಬಸವಣ್ಣ, ಉರಿಲಿಂಗಪೆದ್ದಿ,

**ದೇವರ ಅತ್ಯುತ್ತಮ ದೇವಸ್ಥಾನ ನೀನು. ಬೇರೆ ಯಾವ ದೇಗುಲವನ್ನೊ ವಿಗ್ರಹವನ್ನೊ ಗ್ರಂಥವನ್ನೊ ಪೂಜಿಸುವ ಬದಲು ನಾನು ನಿನ್ನನ್ನೇ ಪೂಜಿಸುತ್ತೇನೆ. ಜೀವಂತವಾದ ದೇವರು ನಿಮ್ಮಲ್ಲಿಯೇ ಇದ್ದಾನೆ. ಆದರೂ ಕೆಲಸಕ್ಕೆ ಬಾರದ ಗುಡಿ ಚರ್ಚು ಮಸೀದಿಗಳನ್ನು ನೀವು ಕಟ್ಟುತ್ತಿರುವಿರಿ. — ಸ್ವಾಮಿ ವಿವೇಕಾನಂದ**

ಚನ್ನ ಬಸವಣ್ಣ ಇವರೇ ಮುಂತಾದವರು ಈ ಚಳುವಳಿಯ ಹರಿಕಾರರಾಗಿದ್ದರು. ಇವರಿಗೆ ಗುಡಿ ವಿಗ್ರಹಗಳು ಮಾತ್ರ ದೇವರನ್ನು ಸಂಧಿಸುವ ಸ್ಥಳವಾಗಿರಲಿಲ್ಲ. ಸ್ವಾಮಿ ವಿವೇಕಾನಂದರು ಹೇಳುವ ವಿರಾಟ್ ಪೂಜೆ ಇವರ ಸಾಧನೆಯ ಮುಖ್ಯಾಂಶವಾಗಿತ್ತು.

### ವಚನಸಾಹಿತ್ಯ ಬೆಳೆದು ಬಂದ ಬಗೆ

'ವಚನ' ಎಂಬ ಪದ ವಿಶಾಲಾರ್ಥವನ್ನು ಹೊಂದಿದೆ. ಈ ಪದವನ್ನು ಅನೇಕ ವಚನಕಾರರು ಬಳಸಿದ್ದಾರೆ. 'ಆದ್ಯರ ವಚನ ಪರುಷ ಕಂಡಯ್ಯಾ', 'ಮೃದು ವಚನವೇ ಸಕಲ ಜಪಂಗಳಯ್ಯಾ', 'ವಚನದಲ್ಲಿ ನಿಮ್ಮ ನಾಮಾಮೃತ ತುಂಬಿ', 'ಕಿವಿಯ ಸೂತಕ ಹೋಯಿತ್ತು ಸದ್ಗುರುವಿನ ವಚನದಿಂದ' ಎಂದು ಮುಂತಾಗಿ ಬಸವಣ್ಣನವರು ಬಳಸಿದ್ದರೆ 'ಆದ್ಯರ ವಚನವೆಂಬುದು ಬಟ್ಟೆಯ ಸಂಬಳವೇ' ಎಂದು ಚನ್ನ ಬಸವಣ್ಣರೂ 'ಆದ್ಯರ ವಚನವೆಂಬುದು ಬಹು ವೇದ್ಯವಯ್ಯಾ' ಎಂದು ಸಿದ್ಧರಾಮರೂ ಬಳಸಿದ್ದಾರೆ.

ಸುಮಾರು ೮೦೦ ವರ್ಷಗಳ ಇತಿಹಾಸವಿರುವ ವಚನಸಾಹಿತ್ಯ ಕರ್ನಾಟಕದ ಬಹು ದೊಡ್ಡ ಸಾಂಸ್ಕೃತಿಕ ಸಂಪತ್ತು, ಜನಸಾಮಾನ್ಯರ ಧ್ವನಿ. ಮೂಲತಃ ಸಾಹಿತ್ಯದ ಉದ್ದೇಶಕ್ಕಾಗಿ ರಚನೆಯಾಗದೆ ಜನರಿಂದ, ಜನರಿಗಾಗಿ ಹುಟ್ಟಿ ಜನಸಾಮಾನ್ಯರ ಮಧ್ಯೆ ಬೆಳೆದ ಅಪ್ಪಟ ದೇಸೀ ಸಾಹಿತ್ಯಪ್ರಕಾರವಾಗಿದೆ. ಇದು ಪಂಡಿತರ ಪುಸ್ತಕದ ಸಾಹಿತ್ಯವಲ್ಲ, ಇದು ಕಾಯಕ ಜೀವಿಗಳ ಅನುಭಾವಿಗಳ ಸಾಹಿತ್ಯ. ಇದು ಆತ್ಮಶುದ್ಧಿ, ಸಮಾಜಶುದ್ಧಿ, ಲೋಕದ ಶುದ್ಧಿಗಾಗಿ ರಚನೆಯಾದವು. ಹೀಗೆ ಹತ್ತು ಹಲವು ವಿಶಾಲಾರ್ಥಗಳನ್ನು ಹೊಂದಿರುವ ವಚನ ಸಾಹಿತ್ಯ ಒಂದು ಹಂತದಲ್ಲಿ ವೈದಿಕ ಸಂಸ್ಕೃತಿಯ ಮೂಢ ನಂಬಿಕೆ, ದಬ್ಬಾಳಿಕೆಯಿಂದ ನಲುಗಿಹೋಗಿದ್ದ ಜನಸಾಮಾನ್ಯರಿಗೆ, ಜಡ್ಡುಗಟ್ಟಿದ್ದ ಸಮಾಜಕ್ಕೆ ನವಚೇತನ ಸ್ಪರ್ಶವನ್ನು ತನ್ನ ಸರಳ, ಸುಂದರ ವಚನಗಳಿಂದ ನೀಡಿತ್ತು. ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಚಂಪೂ ಯುಗದ ನಂತರ ಮುಂದೇನು? ಎಂಬ ಪ್ರಶ್ನೆಗೆ ಉತ್ತರವಾಗಿ ನಿಂತಿತ್ತು. ಈ ಸಾಹಿತ್ಯದ ಕಾಲವನ್ನು ಸಂಶೋಧನಕಾರರು ೧೨ನೇ ಶತಮಾನವೆಂದೇ ಗುರುತಿಸುತ್ತಾರೆ. ಈ ಶತಮಾನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 'ಎರಡನೇ ಸುವರ್ಣ ಬೆಳೆ' ಅಂತಲೂ ಕರೆಯುತ್ತಾರೆ.

ಇಲ್ಲಿನ ವಚನಕಾರರು (ಸಾಮಾನ್ಯವಾಗಿ ಇವರನ್ನು ಕಾಯಕ ಜೀವಿಗಳು, ಶರಣರು ಅಂತ ಕರೆಯುತ್ತಾರೆ) ಬರೀ ಪುಸ್ತಕದ ಹುಳುಗಳಾಗದೇ ಅದರಲ್ಲಿನ ವಿಚಾರಗಳನ್ನು ಅನುಭವದ ಒರೆಗಲ್ಲಿಗೆ ಹಚ್ಚಿ ನೋಡಿ ನಡೆದವರು. ನಡೆ ನುಡಿಗಳಲ್ಲಿ, ಬದುಕು ಬರಹಗಳಲ್ಲಿ ಏಕತೆಯನ್ನು ಸಾಧಿಸಿದವರು. ಅದುವರೆಗೂ ಶೋಷಣೆಯ ಕೇಂದ್ರಗಳಾಗಿದ್ದ ದೇವಾಲಯಗಳನ್ನು ಬಹಿಷ್ಕರಿಸಿ ತಮ್ಮ ದೇಹಗಳಲ್ಲಿಯೇ ದೇವಾಲಯಗಳನ್ನು ಕಂಡುಕೊಂಡವರು. ವಚನಕಾರರಿಗೆ ಪುರೋಹಿತ ಶಾಹಿಯ ವಿರುದ್ಧ ಸಿಟ್ಟಿತ್ತೇ ವಿನಃ ಅದು ಸೇಡಾಗಿರಲಿಲ್ಲ, ವೃತ್ತಿ ಮಾತ್ಸರ್ಯವಾಗಿರಲಿಲ್ಲ. ಶತ-ಶತಮಾನಗಳಿಂದ ಅಸ್ಪೃಶ್ಯರಾಗಿದ್ದವರನ್ನು, ಸ್ಪೃಶ್ಯರನ್ನಾಗಿಯೂ ಮೋಡದ ಮರೆಯಲ್ಲಿ ಅಡಗಿ ಕುಳಿತಿದ್ದ ಜ್ಞಾನಸೂರ್ಯನನ್ನು ಹೊರಬರುವಂತೆಯೂ ಅವರು ಮಾಡಿದರು. ಜಾತಿವ್ಯವಸ್ಥೆಗೆ ಬದಲಾಗಿ ಜಾತ್ಯತೀತ ಸಂಸ್ಕೃತಿಯನ್ನೂ ಢೋಂಗೀ ಸಂಸ್ಕೃತಿಗೆ ವಿರುದ್ಧವಾಗಿ ಸತ್ಯ ಸರಳ ಅಸಲೀ ಸಂಸ್ಕೃತಿಯನ್ನೂ ಚಾಲನೆಗೆ ತಂದರು. ಚಲನಶೀಲವಾದ ಹೋರಾಟದ, ಆದರೆ ಮಾನವೀಯವಾದ ಬದುಕನ್ನು ಪರಿಚಯಿಸಿದರು. ಕಾಯಕವೇ ಪ್ರಧಾನವಾದ ನೈತಿಕ ಶುಚಿತ್ವದ ಸಂಸ್ಕೃತಿಯನ್ನು ತಾವೇ ಮೊದಲು ಆಚರಣೆಗೆ ತಂದು ಜನಸಾಮಾನ್ಯರಲ್ಲಿ ಅದನ್ನು ಹರಡಿ ಅವರು ಸ್ವಾಭಿಮಾನಿಗಳೂ ಸ್ವಾವಲಂಬಿಗಳೂ ಆಗುವಂತೆ ಮಾಡಿದರು.

ಇಡೀ ವಿಶ್ವಸಾಹಿತ್ಯದಲ್ಲಿಯೇ ಒಂದು ವಿಶಿಷ್ಟವಾದ, ಕ್ರಾಂತಿಕಾರಕ, ಕಾರ್ಮಿಕ ಜನತೆಯ ಆಶೋತ್ತರಗಳಿಗೆ ಸ್ಪಂದಿಸಿದ ಏಕೈಕ ಸಾಹಿತ್ಯ ವಚನಸಾಹಿತ್ಯ. ಇಲ್ಲಿನ ಪ್ರತಿಯೊಬ್ಬ ವಚನಕಾರನೂ ತನ್ನ ಅಂತರಂಗದ ಮನುಷ್ಯ ಸಹಜ ವಿಚಾರಗಳನ್ನು ಸರಳವಾಗಿ, ಪ್ರಾಮಾಣಿಕವಾಗಿ ಬಿಚ್ಚಿಡುತ್ತಾನೆ. ಇವರ ಮುಖ್ಯ ಗುರಿ ಸಮಾಜ ಸುಧಾರಣೆಯೇ ಆಗಿದೆ. ಒಮ್ಮೆ ಓದಿದರೆ ಮತ್ತೆ ಮತ್ತೆ ಓದಬೇಕೆನ್ನುವ ಸುಮಧುರವಾದ ಶೈಲಿ ಓದುಗರನ್ನು ಹಿಡಿದಿಡುತ್ತದೆ. ಕೆಲವು ವಚನಗಳು ಇಂದಿನ ಭಾವಗೀತೆಗಳಂತಿದ್ದರೆ, ಇನ್ನು ಕೆಲವು ವಿರಹ-ಮಿಲನದ ನೀತಿಗಳಂತಿವೆ, ಗಝಲ್‌ನಂತಿವೆ. ಕಾಯಕವೇ ದೇವರಾಗಿ ಸಖಿಯಂತೆ ತನ್ನ ಅದ್ಭುತ ಆಂತರಿಕ ಸೌಂದರ್ಯದಿಂದ ನಮ್ಮನ್ನು ಹೆಪ್ಪುಗಟ್ಟಿಸುತ್ತವೆ.

ಕೆಲವು ವಚನಗಳಲ್ಲಿ ಇಂದಿನ ಸಮಸ್ಯೆಗಳಿಗೂ ಸಹ ಸ್ಪಷ್ಟವಾದ ಉತ್ತರವಿದೆ. ಈಗ ನಾವು ಸ್ತ್ರೀಸ್ವಾತಂತ್ರ್ಯ, ಎಲ್ಲರಿಗೂ ಸಮಾನ ಅವಕಾಶ, ಹಕ್ಕು, ಆರ್ಥೀಕರಣ, ಸಮಾಜೀಕರಣ—ಹೀಗೆ ಏನೇನು ಚೀರಾಟ ನಡೆಸುತ್ತಿದ್ದೇವೆಯೋ ಅದನ್ನು ೮೦೦ ವರ್ಷಗಳ ಹಿಂದೆಯೇ ೧೨ನೇ ಶತಮಾನದಲ್ಲಿಯೇ ನಮ್ಮ ವಚನಕಾರರು ಸದ್ದಿಲ್ಲದೇ ಸಾಧಿಸಿ ತೋರಿಸಿದ್ದಾರೆ. ಈ ಸಾಹಿತ್ಯ ಅಂದಿಗೂ ಇಂದಿಗೂ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹೀಗೆ ಎಲ್ಲ ಸ್ತರಗಳಲ್ಲೂ ನಮಗೆ ಒಂದು ಮಾದರಿ. ಅಂಥ ಸಾಧನೆಯನ್ನು ನಾವೂ ಕೂಡ ಕಾಯಕದ ಮೂಲಕವೇ ಸಾಧಿಸಬೇಕು.

**ಯಾವ ಕೆಲಸವೂ ಕ್ಷುದ್ರವಲ್ಲ. ಈ ಜಗತ್ತಿನಲ್ಲಿರುವ ಸಮಸ್ತವೂ ಒಂದು ಆಲದ ಮರದ ಬೀಜದಂತಿದೆ. ಅದು ಆಕಾರದಲ್ಲಿ ಒಂದು ಸಾಸಿವೆ ಕಾಳಿನಷ್ಟು ಚಿಕ್ಕದಾಗಿದ್ದರೂ ಅದರೊಳಗಡೆ ಬೃಹದಾಕಾರದ ಮರ ಹುದುಗಿರುತ್ತದೆ. ಯಾವನು ಇದನ್ನು ಗಮನಿಸುವನೊ ಮತ್ತು ಎಲ್ಲ ಕೆಲಸಗಳನ್ನೂ ನಿಜವಾಗಿಯೂ ಮಹತ್ಕಾರ್ಯಗಳನ್ನಾಗಿ ಮಾಡುವುದರಲ್ಲಿ ಜಯಶೀಲನಾಗುವನೊ ಅವನೇ ನಿಜವಾಗಿಯೂ ಬುದ್ಧಿಶಾಲಿ.**

**— ಸ್ವಾಮಿ ವಿವೇಕಾನಂದ**